**APRIL 17, 2025**
**AKASHAVANI - DHARWAD**
**PRADESH SAAMACHARA (KANNADA) 12.00 P.M.**

<><><>

ಇಂದು, ವಿಶ್ವ ಹಿಮೋಫಿಲಿಯಾ ದಿನಾಚರಣೆ. ಕುಸುಮರೋಗ, ಹಿಮೋಫಿಲಿಯಾ ಮತ್ತು ಇತರೆ ಆನುವಂಶಿಕ ರಕ್ತಸ್ರಾವದ ಅಸ್ವಸ್ಥತೆಗಳ ಬಗ್ಗೆ, ಜಾಗೃತಿ ಮೂಡಿಸಲು, ಮೀಸಲಾದ ದಿನ. ರಕ್ತಸ್ರಾವದ ಅಸ್ವಸ್ಥತೆಗಳಿಗೆ ತುತ್ತಾದ ಹೊಸ ಸದಸ್ಯರನ್ನು ಗುರುತಿಸುವ ಮತ್ತು ತಲುಪಿ, ಚಿಕಿತ್ಸೆ ಮತ್ತು ಆರೈಕೆ ಖಾತ್ರಿಪಡಿಸುವ ದಿನವಾಗಿ, ವಿಶ್ವ ಹಿಮೋಫಿಲಿಯಾ ದಿನ ಆಚರಿಸಲ್ಪಡುತ್ತದೆ.

<><><>

ಟಾಟಾ ಟ್ರಸ್ಟ್ ಅಧ್ಯಯನ ವರದಿ ಪ್ರಕಾರ ನ್ಯಾಯ ಪ್ರದಾನ ಪ್ರಕ್ರಿಯೆಯಲ್ಲಿ ಕರ್ನಾಟಕ ರಾಜ್ಯ ದೇಶಕ್ಕೆ ಮೊದಲ ಸ್ಥಾನದಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಈ ವಿಷಯ ತಿಳಿಸಿರುವ ಅವರು, ಪೊಲೀಸ್ ವ್ಯವಸ್ಥೆ, ನ್ಯಾಯ ವಿತರಣೆ, ಜೈಲು ನಿರ್ವಹಣೆ ಮತ್ತು ಕಾನೂನು ನೆರವು ಒದಗಿಸುವಲ್ಲಿ, ದೇಶದ 18 ದೊಡ್ಡ ಮತ್ತು ಮಧ್ಯಮ ಗಾತ್ರದ ರಾಜ್ಯಗಳ ಪೈಕಿ, ಕರ್ನಾಟಕ, ಅಗ್ರಸ್ಥಾನದಲ್ಲಿದೆ ಎಂದಿದ್ದಾರೆ.

<><><>

ನಾಡಿನ ಸರ್ಕಾರಿ ಶಾಲೆಗಳಿಗೆ, ಮಕ್ಕಳು ಇ ್ಟಪಟ್ಟು ಬರುವಂತಹ ವಾತಾವರಣ ನಿರ್ಮಿಸಿದ್ದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸರ್ಕಾರಿ ಶಾಲೆಗಳು, ಮಕ್ಕಳ ಜ್ಞಾನದ ಹಸಿವು ನೀಗಿಸುವುದು ಮಾತ್ರವಲ್ಲ, ದೈಹಿಕ ಪೋ ಣೆ ಜೊತೆಗೆ, ಸುದೃಢ ಆರೋಗ್ಯ ರೂಪಿಸವಲ್ಲಿ, ತೊಡಗಿಕೊಂಡಿವೆ ಎಂದು, ಮುಖ್ಯಮಂತ್ರಿ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

ಬೆಂಗಳೂರಿನ ಸರ್ಕಾರಿ ಶಾಲೆಯ ವಿದ್ಯಾರ್ಥಿ, ಆಂಜನೇಯ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.
ಆಂಜನೇಯ ಧ್ವನಿ –26 ಸೆಕೆಂದುಗಳು

<><><>

ಮಕ್ಕಳ ಭವಿ ್ಯ ರೂಪಿಸುವಲ್ಲಿ, ರಾಜ್ಯದ ಸರ್ಕಾರಿ ಶಾಲೆಗಳು, ಪ್ರಮುಖ ಪಾತ್ರ ವಹಿಸುತ್ತಿವೆ; ಖಾಸಗಿ ಹಾಗೂ ಸಾರ್ವಜನಿಕರ ಸಹಭಾಗಿತ್ವದಲ್ಲಿ, ಶಾಲೆಗಳನ್ನು ಅಭಿವೃದ್ಧಿ ಪಡಿಸಲು, ಸರ್ಕಾರ ಬದ್ಧವಾಗಿದೆ ಎಂದು, ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಬೆಂಗಳೂರಿನ, ಗಾಂಧಿನಗರ ವಿಧಾನಸಭಾ ಕ್ಷೇತ್ರದ, ಶೇ ಾದ್ರಿಪುರಂನ ಸರ್ಕಾರಿ ಶಾಲೆಯನ್ನು, ಸರ್ಕಾರದ ಅನುದಾನ ಮತ್ತು ಸಿ.ಎಸ್.ಆರ್. ನಿಧಿಯೊಂದಿಗೆ ಅಭಿವೃದ್ಧಿ ಪಡಿಸಲಾಗಿದೆ. ದಿವಂಗತ

ಆರ್. ಗುಂಡೂರಾವ್ ಪ್ರತಿಷ್ಠಾನದಿಂದ, ಮಕ್ಕಳ ಕಣ್ಣು ಮತ್ತು ದಂತ ಪರೀಕ್ಷೆ, ಚಿಕಿತ್ಸೆಯನ್ನು ನಿಯಮಿತವಾಗಿ ಕೈಗೊಳ್ಳಲಾಗುತ್ತಿದೆ ಎಂದು, ಅವರು ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

ಅನುಭವ ಮಂಟಪ; ಬಸವಾದಿ ಶರಣರ ವೈಭವ ಕಾರ್ಯಕ್ರಮದ ಲಾಂಛನವನ್ನು, ಇಂದು ಮಧ್ಯಾಹ್ನ 3.30 ಕ್ಕೆ, ವಿಧಾನಸೌಧದ ಮುಂಭಾಗದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಲಿದ್ದಾರೆ. ಈ ತಿಂಗಳ 29 ಹಾಗೂ 30 ರಂದು, ಕೂಡಲಸಂಗಮದಲ್ಲಿ, ಬಾಗಲಕೋಟೆಯ, ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ ಹಮ್ಮಿಕೊಂಡಿರುವ 'ಅನುಭವ ಮಂಟಪ; ಬಸವಾದಿ ಶರಣರ ವೈಭವ ' ಕಾರ್ಯಕ್ರಮದ ಹಿನ್ನೆಲೆ, ಬೆಂಗಳೂರಿನಿಂದ ರಥ ಆರಂಭಗೊಂಡು, ಬೆಳಗಾವಿ ವಿಭಾಗದ ಎಲ್ಲ ಜಿಲ್ಲೆಗಳಲ್ಲಿ ಸಂಚರಿಸಲಿದೆ ಎಂದು, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ, ತಿಳಿಸಿದ್ದಾರೆ.

<><><>

ಕರ್ನಾಟಕವನ್ನು ತೊಗರಿ ಬೆಳೆಯಲ್ಲಿ, ಮುಂಚೂಣಿ ರಾಜ್ಯವನ್ನಾಗಿಸುವ ಗುರಿ ಹೊಂದಲಾಗಿದೆ ಎಂದು ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ. ಬೆಂಗಳೂರಿನ, ಮಹಾತ್ಮ ಗಾಂಧಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಏರ್ಪಡಿಸಿದ್ದ, ಮುಂಗಾರು ಹಂಗಾಮು ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದ ಅವರು, ಎಲ್ಲಾ ಕ್ಷೇತ್ರಗಳಿಗೂ, ಕೃಷಿ ಭಾಗ್ಯ ಯೋಜನೆ ವಿಸ್ತರಿಸಲಾಗಿದೆ. ಸಾವಯವ ಮತ್ತು ಸಮಗ್ರ ಬೇಸಾಯ ಪದ್ಧತಿ ಪ್ರೋತ್ಸಾಹಿಸಲಾಗುತ್ತಿದೆ ಎಂದರು. ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿ, ಅನುದಾನ ಒದಗಿಸಲಾಗುತ್ತಿದೆ. ಎಲ್ಲ ವರ್ಗದ ರೈತರು, ಸೂಕ್ಷ್ಮ ನೀರಾವರಿ ಸಾಧನಗಳನ್ನು ಕೊಳ್ಳಲು ಈಗ ಯಾವುದೇ  ನಿರ್ಬಂಧವಿಲ್ಲ. ಬಿತ್ತನೆ ಬೀಜ, ರಸ ಗೊಬ್ಬರ ದಾಸ್ತಾನಿನಲ್ಲಿ ಕೊರತೆ ಇಲ್ಲ ಎಂದು, ಸಚಿವರು ಸ್ಪಷ್ಟ ಪಡಿಸಿದರು.

<><><>

ಬಾಗಲಕೋಟೆ ಜಿಲ್ಲೆಯ, ಕಂದಾಯ ಇಲಾಖೆಗೆ ಸಂಬಂಧಿಸಿದ, ದರಖಾಸ್ತ ಪೋಡಿಯ ಬಾಕಿ ಪ್ರಕರಣಗಳನ್ನು, ಆದ್ಯತೆಯ ಮೇಲೆ, ತುರ್ತಾಗಿ ವಿಲೇವಾರಿ ಮಾಡುವಂತೆ, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ, ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ, ವಿಡಿಯೋ ಸಂವಾದ ನಡೆಸಿದ ಸಚಿವರು, ಶ್ರೀ ಸಾಮಾನ್ಯರಿಗೆ ತೊಂದರೆಯಾಗದಂತೆ, ಕಾಲಮಿತಿಯಲ್ಲಿ, ಗುರಿ ನಿಗದಿ ಪಡಿಸಿಕೊಂಡು, ಪೋಡಿ ಪ್ರಕರಣಗಳನ್ನು ಇತ್ಯರ್ಥ ಪಡಿಸುವಂತೆ, ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

<><><>

ಉತ್ತರಕನ್ನಡ ಜಿಲ್ಲೆ, ಜೋಯಿಡಾ ತಾಲೂಕು ಕೇಂದ್ರದಲ್ಲಿ, ನೂತನ ಅಗ್ನಿ ಶಾಮಕ ಠಾಣೆ ಕಟ್ಟಡವನ್ನು, ಶಾಸಕ ಆರ್.ವಿ. ದೇಶಪಾಂಡೆ, ಉದ್ಘಾಟಿಸಿದರು. ಗ್ರಾಮೀಣ ಭಾಗ ಮತ್ತು ಅರಣ್ಯ ಪ್ರದೇಶಕ್ಕೆ ಸಮೀಪವಿರುವ ಜೋಯಿಡಾದಲ್ಲಿ, ಅಗ್ನಿಶಾಮಕ ಘಟಕ ಸ್ಥಾಪನೆ, ಅಮೂಲ್ಯ ಕಾಡು, ಜೀವ ರಕ್ಷಣೆ ಮತ್ತು ಆಸ್ತಿ ಕಾಪಾಡುವಲ್ಲಿ, ಮಹತ್ವದ ಪಾತ್ರ ವಹಿಸಲಿದೆ ಎಂದು, ಅವರು ತಿಳಿಸಿದರು.

<><><>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, 8 ಸಂಚಾರಿ ಪಶು ಚಿಕಿತ್ಸಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಜನವರಿಯಿಂದ ಮಾರ್ಚ್ ಅಂತ್ಯದವರೆಗೆ, 3 ಸಾವಿರದ 243 ದನ, ಕರುಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂದು, ಪಶು ಪಾಲನಾ ಇಲಾಖೆ ಉಪ ನಿರ್ದೇಶಕ ಡಾಕ್ಟರ್ ರಂಗಪ್ಪ ತಿಳಿಸಿದ್ದಾರೆ. (48)

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.
ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ.

<><><>